<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ</u>

**CC No: 128/2019**

| | | |
|---|---|---|
| CW : 6 | | PW: 5 |
| ಹೆಸರು | : | ಇಂದಿರಾಬಾಯಿ |
| ಗಂಡನ ಹೆಸರು | : | ಶಂಕರಲಿಂಗ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಮನೆಗೆಲಸ |
| ಸ್ಥಳ | : | ಮಿಣಜಿಗಿ |

(ದಿನಾಂಕ: **31-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಮುಖ್ಯ ವಿಚಾರಣೆ: ಸ.ಸ.ಅ ರವರಿಂದಃ</u>

ಆರೋಪಿ ನಂ.1 ನನ್ನ ಅಳಿಯ, ಆರೋಪಿ ನಂ.2 ನನ್ನ ಬೀಗತಿ, ಆರೋಪಿ ನಂ.3 ಮತ್ತು 4 ರವರು ಚಾಸಾ-1 ರವರ ನಾದನಿಯರು, ಆರೋಪಿ ನಂ.5 ಚಾಸಾ-1 ರವರ ಮೈದುನ. ಚಾಸಾ-1 ನನ್ನ ಮಗಳು. ಚಾಸಾ-4, 5 ಮತ್ತು 7 ರವರು ನನ್ನ ಆತ್ಮಿಯರು. ಸುಮಾರು 12 ವರ್ಷಗಳ ಹಿಂದೆ ನನ್ನ ಮಗಳ ಹಾಗೂ ಆರೋಪಿ ನಂ.1 ರ ನಡುವೆ ಮದುವೆ ಆಗಿರುತ್ತದೆ. ನಂತರ ನಾಲ್ಕು ತಿಂಗಳುವರೆಗೆ ಚೆನ್ನಾಗಿ ಇಟ್ಟುಕೊಂಡು ಆಮೇಲೆ ಹೊಡೆಯುವುದು ಬಡಿಯುವುದು ಮಾಡುತ್ತಿದ್ದರು. ನಾನು ನಾಲ್ಕು ಜನರನ್ನು ಕರೆದುಕೊಂಡು ಹೋಗಿ ನ್ಯಾಯ ಪಂಚಾಯತಿ ಮಾಡಿದರೂ ಸಹ ಅವರು ಅದೇ ರೀತಿ ಕಿರುಕುಳ ಕೊಟ್ಟಿರುತ್ತಾರೆ. ಅವರ ಹೆಸರು ಭಗವಂತ್ರಾಯ, ಸಂಗು, ಆನಂದ ಅಂತ ಇರುತ್ತದೆ. ಅದರ ದಿನಾಂಕ ನನಗೆ ಹೇಳಲು ಬರುವುದಿಲ್ಲ ಕಾರಣ ನಾನು ಶಾಲೆ ಕಲೆತಿರುವುದಿಲ್ಲ. ಮದುವೆಯ ಕಾಲಕ್ಕೆ ವರನಿಗೆ ರೂ.100000/- ಗಳ ಸಾಮಾನುಗಳು, ಆರು ತೊಲೆ ಬಂಗಾರ ಹಾಗೂ ರೂ. 60,000/- ನಗದು ಹಣವನ್ನು ಕೊಟ್ಟು ಮರತೂರು ಗ್ರಾಮದ ಅಣವೀರಪ್ಪ ಗುಡಿಯಲ್ಲಿ ಮದುವೆ ಆಗಿರುತ್ತದೆ. ಆದರೂ ಸಹ ಆರೋಪಿತರೆಲ್ಲರೂ ಚಾಸಾ-1 ರವರಿಗೆ ಹೊಡಿಬಡಿ ಮಾಡಿ ಕಿರುಕುಳ ನೀಡಿರುತ್ತಾರೆ. ನಂತರ ನಾನು ಕರೆದುಕೊಂಡು ಹೋಗಿ ಮನೆಯಲ್ಲಿ ಇಟ್ಟುಕೊಂಡಿರುತ್ತೇನೆ. ಚಾಸಾ-1 ರವರಿಗೆ 10 ವರ್ಷದ ಮಗು ಸಹ ಇರುತ್ತದೆ. ಆರೋಪಿ ನಂ.1 ರವರು ನಾನು 10 ಮದುವೆ ಮಾಡಿಕೊಳ್ಳುತ್ತೇನೆ ಡೈವರ್ಸ ಬೇಕು ಅಂತ ಹೇಳಿದಾಗ ನಾವು ಪ್ರಕರಣ ದಾಖಲಿಸಿರುತ್ತೇವೆ. ಚಾಸಾ-1 ರವರು ಫಿರ್ಯಾದಿಯನ್ನು ನೀಡಿರುತ್ತಾರೆ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಇಷ್ಟನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ</u>

CC No: 128/2019
CW : 6 PW: 5

ದಿ: 05/04/2010 ರಂದು ನನ್ನ ಮಗಳ ಮದುವೆ ಆಗಿರುತ್ತದೆ ಎಂದರೆ ಸರಿ. ನಂತರ ಆರೋಪಿತರಾದ 3 ಮತ್ತು 4 ರವರು ಅಡುಗೆ ಚೆನ್ನಾಗಿ ಮಾಡಲು ಬರುವುದಿಲ್ಲ ಅಂತ ಕಿರುಕುಳ ನೀಡಿರುತ್ತಾರೆ ಎಂದರೆ ಸರಿ. ಆರೋಪಿ ನಂ.4 ಮತ್ತು 5 ರವರು ಬಂಗಾರ ತರಲು ಕಿರುಕುಳ ನೀಡುತ್ತಿದ್ದರು ಎಂದರೆ ಸರಿ. ಆರೋಪಿ ನಂ.2 ರಿಂದ 5 ರವರ ಮಾತು ಕೇಳಿ ಆರೋಪಿ ನಂ.1 ರವರು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟು ಹೊಡೆಯುತ್ತಿದ್ದಾನೆ ಅಂತ ಚಾಸಾ-1 ರವರು ನಮ್ಮ ಮನೆಗೆ ಬಂದಾಗ ಹೇಳಿದ್ದರಿಂದ ನಾನು, ಚಾಸಾ-4 ಮತ್ತು 5 ರವರು ಕೂಡಿ ಆರೋಪಿತರ ಮನೆಗೆ ಹೋಗಿ ಚಾಸಾ-1 ರವರನ್ನು ಸರಿಯಾಗಿ ನೋಡಿಕೊಳ್ಳುವಂತೆ ಪಂಚಾಯತಿ ಮಾಡಿ ಸ್ವಲ್ಪ ದಿನ ಚಾಸಾ-1 ರವರು ನಮ್ಮ ಜೊತೆ ಇರುವಂತೆ ಹೇಳಿ ದಿ: 02/04/2018 ರಂದು ಮಿಣಜಗಿಗೆ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿ. ನಾನು, ಚಾಸಾ-1 ರವರು ಕೂಡಿ ಆರೋಪಿ ನಂ.1 ರವರ ವಿರುದ್ಧ ಕೌಟುಂಬಿಕ ನ್ಯಾಯಾಲಯ ಕಲಬುರಗಿಯಲ್ಲಿ ದಾವೆ ಹೂಡಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಲು ನೋಟೀಸು ಕಳುಹಿಸಿರುತ್ತಾರೆ ಎಂದರೆ ಸರಿ. ಅದರಂತೆ ದಿ: 20/06/2018 ರಂದು ನ್ಯಾಯಾಧೀಶರ ಮುಂದೆ ಚಾಸಾ-1 ಮತ್ತು ಆರೋಪಿ ನಂ.1 ಇಬ್ಬರೂ ಚೆನ್ನಾಗಿ ಇರುತ್ತೇವೆ ಅಂತ ಹೇಳಿ ಆರೋಪಿ ನಂ.1 ರವರ ಮನೆಗೆ ಹೋಗಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಆರೋಪಿತರೆಲ್ಲರೂ ಮಾನಸಿಕ ದೈಹಿಕ ಕಿರುಕುಳ ನೀಡಿದ್ದರಿಂದ ಅವಳು ಬೇಸತ್ತು ನಮ್ಮ ಮನೆಗೆ ಬಂದಿರುತ್ತಾಳೆ ಎಂದರೆ ಸರಿ. ದಿ: 26/01/2019 ರಂದು ಬೆಳಿಗ್ಗೆ 9 ಗಂಟೆಗೆ ನಾನು, ಚಾಸಾ-1 ಮರತೂರು ಗ್ರಾಮಕ್ಕೆ ಹೋಗಿ ಆರೋಪಿ ನಂ.1 ಇತನು ಎರಡನೇ ಮದುವೆ ಆಗಿರುವ ಬಗ್ಗೆ ವಿಚಾರಿಸಿದಾಗ ಚಾಸಾ-1 ಇವಳಿಗೆ ಅವಾಚ್ಯ ಶಬ್ಧಗಳಿಂದ ಬೈದು ಏನ ಮಾಡಕೊತಿ ಮಾಡಕೋ ನಾ ಮನಸ್ಸು ಮಾಡಿದರೆ 10 ಮದುವೆ ಆಗುತ್ತೇನೆ ಅಂತ ದಬ್ಬಿಸಿಕೊಂಡು ಹೋಗಿರುತ್ತಾನೆ ಎಂದರೆ ಸರಿ.

ಈ ಹಂತದಲ್ಲಿ ಶ್ರೀ. ಬಿ.ಎಸ್.ಎಮ್. ರವರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ.**200/-** ಖರ್ಚು ಸಮೇತ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

**Sd/-**
ಸಿವಿಲ್ ನ್ಯಾಯಾಧೀಶರು, ಶಹಬಾದ.